ದಿನಾಂಕಃ 04.08.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು: ವಾದಿ ಪರ ವಕೀಲರಿಂದ:</u>**

1. ವಾದಿಯವರ ಅಜ್ಜಿ ಪುಟ್ಟಮ್ಮನವರ ಗಂಡನ ಹೆಸರು ಸೋಮೆಗೌಡ ಎಂದರೆ ಸರಿ.

2. ದಾವಾ ಸ್ವತ್ತು ಸೋಮೆಗೌಡ ರವರ ಮರಣದ ನಂತರ ಪುಟ್ಟಮ್ಮನವರಿಗೆ ಖಾತೆಯಾಗಿದೆ ಎಂದರೆ ಆಗಿರಬಹುದು.

3. 1968-69 ನೇ ಸಾಲಿನಲ್ಲಿ ಪುಟ್ಟಮ್ಮರವರ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ಇರಬಹುದು.

4. ಸೋಮೆಗೌಡರವರು ಬದುಕಿರುವಾಗೇ ದಾವಾ ಸ್ವತ್ತಿನಲ್ಲಿ ಹಳೆ ಮನೆ ಇತ್ತು ಎಂದರೆ ನನೆ ಗೊತ್ತಿಲ್ಲ. ಅದೇ ಮನೆಯಲ್ಲಿ ಪುಟ್ಟಮ್ಮ ಮತ್ತು ಅವರ ಮಕ್ಕಳು ವಾಸವಿದ್ದರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯನ್ನು ಕೆಡವಿ ವಾದಿಯವರು ಹೊಸ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ.

5. ವಾದಿಯವರ ಮನೆಯ ಕಂದಾಯವನ್ನು ನಾನು ಕಟ್ಟಿರುವುದಿಲ್ಲ. ನಮ್ಮ ಮನೆಗೆ ನಾನು ಕಂದಾಯ ಕಟ್ಟಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

6. ದಾವಾ ಆಸ್ತಿಯಲ್ಲಿ ನಿಮ್ಮ ಮನೆ ಇರುವ ಬಗ್ಗೆ ದಾಖಲೆಯನ್ನು ಹಾಜರು ಮಾಡಿದ್ದೀರಾ ಎಂದರೆ ಇಲ್ಲ.

7. ವಾದಿಯ ತಂದೆ ದ್ಯಾವಪ್ಪಗೌಡರು 2007 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಇರಬಹುದು.

8. ದಾವಾ ಆಸ್ತಿಯಲ್ಲಿ ಇರುವ ಮನೆಯಲ್ಲಿ ದ್ಯಾವಪ್ಪಗೌಡರವರು ಅವರು ಬದುಕಿರುವವರಿಗೂ ವಾಸವಿದ್ದರು ಎಂದರೆ ಸರಿ.

9. ಈಗಲೂ ಸಹ ದ್ಯಾವಪ್ಪಗೌಡರವರ ಹೆಸರಿನಲ್ಲಿ ಕಂದಾಯ ದಾಖಲೆ ಇದೆ ಎಂದರೆ ? ಅವರು ಜಾಗದಲ್ಲಿ ಇರಬಹುದು ಎಂದು ನುಡಿಯುತ್ತಾರೆ.

10. ವಾದಿ ಮತ್ತು ಅವರ ಕುಟುಂಬದವರು ನಿಮ್ಮ ಪತ್ನಿಯ ವಿರುದ್ಧ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಮೂಡಿಗೆರೆಯಲ್ಲಿ ದಾವಾ ಹಾಕಿದ್ದಾರೆ ಎಂದರೆ ಸರಿ. ಸದರಿ ದಾವಾವನ್ನು ಮಾಲೀಕತ್ವ ಮತ್ತು ನಿರ್ಬಂದಕಾಜ್ಞೆಗೆ ಹಾಕಿದ್ದೀರಾ ಎಂದರೆ ಸರಿ. ನೀವು ಅವರ ಜಾಗಕ್ಕೆ 2023 ರಲ್ಲಿ ತೊಂದರೆ ಕೊಟ್ಟಿದ್ದಕ್ಕೆ ಹಾಕಿದ್ದಾರೆ ಎಂದರೆ? ಸರಿಯಲ್ಲ.

11. ದಾವಾ ಸ್ವತ್ತನ್ನು ನೀವು 2023 ರಲ್ಲಿ ಸುಪ್ರೀಮ್ ರವರಿಗೆ ಕ್ರಯ ಮಾಡಲು ಮಾತುಕಡೆ ಮಾಡಿದ್ದೀರಾ ಎಂದರೆ ಅವರು ಕೇಳಿದ್ದರು ಎಂದು ನುಡಿಯುತ್ತಾರೆ.

12. ಸದರಿ ವಿಚಾರವಾಗಿ ನಿಮಗೆ ಮತ್ತು ಸುಪ್ರೀಮ್ ರವರಿಗೆ ವ್ಯವಹಾರ ಮುಂದುವರೆಸಲು ಹೇಳಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಈ ದಾವೆಯನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ.

13. ವಾದಿಯರೇ ದಾವಾ ಸ್ವತ್ತಿನಲ್ಲಿ ಸ್ವಾಧೀನ ಇದ್ದು ನಿಮಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

14. ವಾದಿಯವರ ಅಣ್ಣ ತಮ್ಮಂದಿರು ದಾವಾ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದಾರೆ ಎಂದರೆ ಸರಿಯಲ್ಲ.

15. 1 ನೇ ವಾದಿಯವರು ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದಾರೆ ಎಂದರೆ ನಮ್ಮ ಒಪ್ಪಿಗೆಯ ಮೇರೆಗೆ ಇದ್ದರು ಎಂದು ನುಡಿಯುತ್ತಾರೆ.

16. ಮೋಸದ ಕ್ರಯಪತ್ರದ ಮೂಲಕ ನಿಮ್ಮ ಸ್ವಾಧೀನ ವರ್ಗಾವಣೆಯಾಗಿಲ್ಲ ಎಂದರೆ ಸರಿಯಲ್ಲ.

17. 2023 ರಲ್ಲಿ ನಮಗೆ ಹಕ್ಕು ವರ್ಗಾವಣೆ ಮಾಡಿಕೊಡುವಂತೆ ನಿಮಗೆ ಕೇಳಿದ್ದರು ಎಂದರೆ ಸರಿ. ಆದರೆ ನಾನು ಮಾರುವುದಿಲ್ಲ ಎಂದು ನುಡಿಯುತ್ತಾರೆ.

18. ಸದರಿ ದಾವಾ ಸ್ವತ್ತುಗಳಲ್ಲಿ ವಾದಿಯವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಿಮಗಾಗಲೀ ನಿಮ್ಮ ಕುಟುಂಬದವರಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

19. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮತ್ತು ಲಿಖಿತ ಹೇಳಿಕೆಯಲ್ಲಿ ತಿಳಿಸಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

20. ನ್ಯಾಯಾಲಯದ ಮುಂದೆ ಸುಳ್ಳು ತಕರಾರನ್ನು ಹಾಕಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.